SRI DEVARAJ URS ACADEMY OF HIGHER EDUCATION & RESEARCH
SRI DEVARAJ URS MEDICAL COLLEGE
Tamaka, Kolar
UNIVERSITY LIBRARY & LEARNING RESOURCE CENTRE

ವಿಜಯ ಕರ್ನಾಟಕ

Online Newspaper Clipping Service
Dtd- Monday, 9th, December- 2019



# ವೈದ್ಯಕೀಯ ಕೋರ್ಸ್ ಶುಲ್ಕ ಭಾರಿ ಇಳಿಕೆ?

**ಹೊಸದಿಲ್ಲಿ:** ಖಾಸಗಿ ವೈದ್ಯಕೀಯ ಕಾಲೇಜುಗಳ ದುಬಾರಿ ಶಿಕ್ಷಣ ಶುಲ್ಕಕ್ಕೆ ಕಡಿವಾಣ ಹಾಕಲು ಕೇಂದ್ರ ಸರಕಾರ ಕಸರತ್ತು ನಡೆಸಿದ್ದು, ಈ ದಿಸೆಯಲ್ಲಿ ನೇಮಕಗೊಂಡಿದ್ದ ತಜ್ಞರ ಸಮಿತಿಯು ಭಾರಿ ಪ್ರಮಾಣದ ಶುಲ್ಕ ಇಳಿಕೆಯ ಪ್ರಸ್ತಾಪ ಮಂಡಿಸಿದೆ.

ಖಾಸಗಿ ಕಾಲೇಜುಗಳ ಎಂಬಿಬಿಎಸ್ ಶುಲ್ಕದಲ್ಲಿ ಶೇ.70ರಷ್ಟು ಹಾಗೂ ಸ್ನಾತಕೋತ್ತರ ಕೋರ್ಸ್‌ಗಳ ಶುಲ್ಕವನ್ನು ಶೇ.90 ರಷ್ಟು ಕಡಿತ ಮಾಡಲು ಶಿಫಾರಸು ಮಾಡಲಾಗಿದೆ.

ಶುಭ ಸುದ್ದಿ

ವೈದ್ಯಕೀಯ ಶಿಕ್ಷಣ ವ್ಯವಸ್ಥೆಗೆ ಹೊಸ ರೂಪು ನೀಡುವ ಮಹತ್ವಾಕಾಂಕ್ಷೆಯೊಂದಿಗೆ ಸರಕಾರ, ರಾಷ್ಟ್ರೀಯ ವೈದ್ಯಕೀಯ ಆಯೋಗ ರಚಿಸಿದ್ದು, ಇದರ ಅಡಿಯಲ್ಲಿಯೇ ಶುಲ್ಕ ಸುಧಾರಣೆಗೆ ಮುನ್ನುಡಿ ಬರೆಯಲಾಗಿದೆ.

ಎನ್‌ಎಂಸಿ ಕಾಯಿದೆ ಅಡಿ ಆಡಳಿತ ನಿರ್ವಾಹಕರ ಮಂಡಳಿ ನೇಮಿಸಿ, ಮಾರ್ಗದರ್ಶಿ ಸೂತ್ರ ರಚಿಸುವಂತೆ ಆದೇಶ ನೀಡಲಾಗಿತ್ತು. ಆ ತಜ್ಞರ ಮಂಡಳಿ ಮುಂದಿನ ಶೈಕ್ಷಣಿಕ ವರ್ಷದಿಂದ ಅನ್ವಯವಾಗುವಂತೆ ಹೊಸ ಶುಲ್ಕ ನೀತಿಯನ್ನು ಶಿಫಾರಸು ಮಾಡಿದೆ.

ವಿದ್ಯಾರ್ಥಿಗಳ ಮೇಲಿನ ಶುಲ್ಕ ಹೊರ ಇಳಿಸುವ ನಿಟ್ಟಿನಲ್ಲಿ ಆಡಳಿತ ಮಂಡಳಿ ಸದಸ್ಯರು ಎಲ್ಲ ರಾಜ್ಯಗಳ ಶಿಕ್ಷಣ ಸಂಸ್ಥೆಗಳ ಪ್ರಮುಖರು ಹಾಗೂ ಶಿಕ್ಷಣ ತಜ್ಞರ ಜತೆ ಹಲವು ಸುತ್ತಿನ ಸಮಾಲೋಚನೆ ನಡೆಸಿಯೇ ಅಂತಿಮ ತೀರ್ಮಾನಕ್ಕೆ ಬಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಎನ್‌ಎಂಸಿ ಕಾಯಿದೆಯ ಕ್ಲಾಸ್ 1ರ ಸಬ್ ಸೆಕ್ಷನ್ (1) ಅಡಿಯಲ್ಲಿ ಆಯೋಗಕ್ಕೆ ಖಾಸಗಿ ವೈದ್ಯ ಕಾಲೇಜು ಹಾಗೂ ಸ್ವಾಯತ್ತ ವಿವಿಗಳ ಶೇ.50ರಷ್ಟು ಸೀಟುಗಳ ಶುಲ್ಕ ನೀತಿಯನ್ನು ನಿರ್ಧರಿಸುವ ಅಧಿಕಾರ ನೀಡಲಾಗಿದೆ. ಈ ಕಾಯಿದೆ ಅಡಿಯಲ್ಲಿಯೇ ಈಗ ಹೊಸ ಶುಲ್ಕ ನೀತಿ ಜಾರಿಗೊಳ್ಳಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವೈದ್ಯ ಶಿಕ್ಷಣದ ಸುಧಾರಣೆಗಾಗಿಯೇ ಭಾರತೀಯ ವೈದ್ಯಕೀಯ ಪರಿಷತ್ತನ್ನು ರದ್ದುಗೊಳಿಸಿ ರಾಷ್ಟ್ರೀಯ ವೈದ್ಯಕೀಯ ಮಂಡಳಿ ಸ್ಥಾಪಿಸಲು ಸರಕಾರ ಮುಂದಾಗಿದೆ. ನೂತನ ಮಂಡಳಿ ರಚನೆಯ ಕಾರ್ಯಗಳು ಬಹುತೇಕ ಪೂರ್ಣಗೊಂಡಿವೆ.

## ಎಷ್ಟು ಕಡಿಮೆ?

ಹೊಸ ನೀತಿಯ ಪ್ರಕಾರ, ಖಾಸಗಿ ಕಾಲೇಜುಗಳ ಶೇ.50ರಷ್ಟು ಸೀಟುಗಳ ಶುಲ್ಕವು 6 ಲಕ್ಷದಿಂದ 10 ಲಕ್ಷ ರೂ.ಗಳವರೆಗೆ ನಿಗದಿಯಾಗಲಿದೆ. ಈಗ ದೇಶದ ಬಹುತೇಕ ಖಾಸಗಿ ಕಾಲೇಜುಗಳಲ್ಲಿ ಎಂಬಿಬಿಎಸ್ ಕೋರ್ಸ್ ವಾರ್ಷಿಕ ಶುಲ್ಕ 25 ಲಕ್ಷ ರೂಪಾಯಿ ಇದೆ. ಮೂರು ವರ್ಷ ಅವಧಿಯ ಸ್ನಾತಕೋತ್ತರ ವೈದ್ಯ (ಪಿಜಿ) ಕೋರ್ಸ್‌ಗಳ ಶುಲ್ಕ 1 ಕೋಟಿಯಿಂದ 3 ಕೋಟಿ ರೂ.ಗಳವರೆಗೆ ಇದೆ. ಇದಲ್ಲೂ 90% ರಷ್ಟು ಇಳಿಕೆಗೆ ಶಿಫಾರಸು ಮಾಡಲಾಗಿದೆ. ಈ ಶುಲ್ಕ ಇಳಿಕೆಯು ಖಾಸಗಿ ಕಾಲೇಜುಗಳ ಶೇ. 50ರಷ್ಟು ಸೀಟುಗಳ ಮೇಲೆ ಮಾತ್ರ ಅನ್ವಯವಾಗಲಿದೆ.



## ಕಾರಣವೇನು?

ಬಡ ವಿದ್ಯಾರ್ಥಿಗಳು ಭರಿಸಲು ಸಾಧ್ಯವೇ ಆಗದ ಈ ದುಬಾರಿ ಶುಲ್ಕದ ವಿರುದ್ಧ ಹಲವು ವರ್ಷಗಳಿಂದ ವಿರೋಧ ಇತ್ತು. ಎನ್‌ಡಿಎ ಸರಕಾರ ಈ ದಿಸೆಯಲ್ಲಿ ರಾಷ್ಟ್ರೀಯ ವೈದ್ಯಕೀಯ ಮಂಡಳಿ ಕಾಯಿದೆ ರಚಿಸಿ, ದೊಡ್ಡ ಸುಧಾರಣೆಗೆ ಮುನ್ನುಡಿ ಬರೆದಿದೆ. ಎನ್‌ಎಂಸಿ ಕಾಯಿದೆಗೆ ಕಳೆದ ಆಗಸ್ಟ್‌ನಲ್ಲಿಯೇ ರಾಷ್ಟ್ರಪತಿಗಳ ಅಂಕಿತ ದೊರೆತಿದೆ.